**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**ಎಸ್.ಸಿ. 116/2020**

| | | |
|---|---|---|
| ಸಾಕ್ಷಿದಾರರ ಹೆಸರು | : **ಬಾಲಸುಬ್ರಹ್ಮಣ್ಯ** | *ಪ್ರಮಾಣ ಮಾಡಿದ ದಿನಾಂಕ:* |
| ತಂದೆ ಹೆಸರು | : **ಮಾದೇಗೌಡ** | **14.03.2023** |
| ವಯಸ್ಸು | : **36** ವರ್ಷ | |
| ವೃತ್ತಿ | : **ಖಾಸಗಿ ಕೆಲಸ** | **ಪಿಡಬ್ಲ್ಯೂ : 13** |
| ವಾಸ ಸ್ಥಳ | : **ಮೈಸೂರು** | **ಸಿಡಬ್ಲ್ಯೂ : 15** |

***ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ:***

**ನನ್ನ ತಾಯಿ ಕಮಲಮ್ಮರವರು ನಮ್ಮ ಮನೆಯ ಹತ್ತಿರ ಒಂದು ಪೆಟ್ಟಿ ಅಂಗಡಿ ಇಟ್ಟುಕೊಂಡಿದ್ದಾರೆ. ನ್ಯಾಯಾಲಯದೆದುರು ಹಾಜರಿರುವ 2 ರಿಂದ 5, 7 ರವರನ್ನು ನೋಡಿದ್ದೇನೆ. ವಿಸಿ ಮೂಲಕ ಹಾಜರುಪಡಿಸಿದ 2ನೇ ಆರೋಪಿಯನ್ನು ನೋಡಿಲ್ಲ. ನಾನು ನನ್ನ ಕೆಲಸ ಮುಗಿಸಿ ಕೊಂಡು ರಾತ್ರಿ 10 ಗಂಟೆವರೆಗೆ ವ್ಯಾಪಾರ ಮಾಡುತ್ತೇನೆ. ಆರೋಪಿಗಳು ಸಿಗರೇಟ್ ತೆಗೆದು ಕೊಂಡು ಹೋಗಲು ನಮ್ಮ ಅಂಗಡಿಗೆ ಬರುತ್ತಿದ್ದರು. ಮೃತ ಬಾಬು ನನಗೆ ಪರಿಚಯ ಇಲ್ಲ. ಆರೋಪಿಗಳು ಮೃತ ಬಾಬುನ ಮೇಲೆ ಗಲಾಟೆ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. ಆರೋಪಿಗಳು ಬಾಬುನ ಮೇಲೆ ಗಲಾಟೆ ಮಾಡಬೇಕು ಅಂತ ಮಾತನಾಡಿಲ್ಲ ಮತ್ತು ಅದನ್ನು ನಾನು ಕೇಳಿಸಿಕೊಂಡಿಲ್ಲ. ಪೊಲೀಸರು ಆರೋಪಿ ಗಳು ನನ್ನ ಅಂಗಡಿ ಹತ್ತಿರ ಬರುತ್ತಿದ್ದ ಬಾಬು ಎನ್ನುವವನನ್ನು ಕೊಲೆ ಮಾಡಿದ ವಿಚಾರಕ್ಕೆ ಕರೆಸಿದ್ದರು. ಪೊಲೀಸರು ನನ್ನನ್ನು ಕರೆಸಿ ಮೇಲಿನ ವಿಚಾರವನ್ನು ಹೇಳಿದ್ದರು.**

*(ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೇಳುತ್ತಾರೆ. ಸಾಕ್ಷಿಯು ಪೊಲೀಸರ ಎದುರಿನ ಹೇಳಿಕೆಯ ಪ್ರತಿಕೂಲವಾಗಿ ನುಡಿಯುತ್ತಿರುವುದರಿಂದ ಅನುಮತಿ ನೀಡಲಾಯಿತು.)*

***ಪಾಟೀ ಸವಾಲು: ಮಾನ್ಯ ಸರ್ಕಾರಿ ಅಭಿಯೋಜಕರಿಂದ:-***

**2. ದಿನಾಂಕ 11.02.2019ರಂದು ರಾತ್ರಿ ಸುಮಾರು 10 ಗಂಟೆಗೆ ನಾನು ಅಂಗಡಿಯಲ್ಲಿದ್ದಾಗ ಆರೋಪಿಗಳು ಬಂದು ಸಿಗರೇಟ್ ತೆಗೆದುಕೊಂಡರು ಮತ್ತು ಅವರು ಮದ್ಯಪಾನ ಮಾಡಿದ್ದರು ಅಂತ ನಾನು ಹೇಳಿಲ್ಲ. ಆಗ ಆರೋಪಿ ಪ್ರೇಮ ಎನ್ನವವನು ಬಾಬುನನ್ನು ಇವತ್ತು ಬಿಡಬಾರದು ಅಂತ ಮಾನತನಾಡಿಕೊಳ್ಳುತ್ತಿದ್ದರು ಮತ್ತು ನಂತರ ಹೋದರು ಅಂತ ಹೇಳಿದ್ದೇನೆ ಎಂದರೆ ಸರಿಯಲ್ಲ. ನಂತರ ಎಲ್ಲ ಆರೋಪಿಗಳು ಸೇರಿಕೊಂಡು ಬಾಬುನನ್ನು ಕೊಲೆ ಮಾಡಿದ ವಿಚಾರ ಮರದಿನ ಬೆಳಿಗ್ಗೆ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಈ ರೀತಿಯಾಗಿ ನಾನ ಪೊಲೀಸರ ಮುಂದೆ ನಿಪಿ-17ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ನಮ್ಮ ಅಂಗಡಿಯ ಗಿರಾಕಿಗಳಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.**

**ಪಾಟೀ ಸವಾಲು : ಎಲ್ಲಾ ಆರೋಪಿಗಳ ಪರ ವಕೀಲರಿಂದಃ- ಇಲ್ಲ**

**ಮರು ವಿಚಾರಣೆಃ- - ಇಲ್ಲ -**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**14.03.2023.**
**[ ಜಿ.ಎಸ್. ಸಂಗ್ರೇಶಿ ]**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಮೈಸೂರು.**